

ಚಳಿಗಾಲದ ಅತಿಥಿ
ಕಿತ್ತಳೆ ನೆಲ ಸಿಳ್ಳಾರ

ಇರುವ ಲಕ್ಷಗಟ್ಟಲೆ ಬೆಲೆಯ ಲೆನ್ಸ್‌ಗಳನ್ನು ಬಳಸಿ ಹಕ್ಕಿ ಛಾಯಾಗ್ರಹಣ ಮಾಡುವುದು ಆರ್ಥಿಕವಾಗಿ ಗಟ್ಟಿಯಾಗಿರುವ ಯಾವ ಛಾಯಾಗ್ರಾಹಕನೂ ಮಾಡಬಹುದು ಎನ್ನುವಷ್ಟು ಸಹಜ. ಆದರೆ ಸಣ್ಣ ಪುಟ್ಟ ಲೆನ್ಸ್‌ಗಳನ್ನೇ ಬಳಸಿ ಹಕ್ಕಿ ಚಿತ್ರಗಳನ್ನು ಸೆರೆಹಿಡಿಯೋದು, ತಿಂಡಿ ಆನ್‌ಲೈನ್‌ನಲ್ಲಿ ಆರ್ಡರ್ ಮಾಡದೆ, ನಾವೇ ಪುಟ್ಟ ಹೊಟೇಲ್ ಹುಡುಕಿಕೊಂಡು ಹೋಗಿ, ಅಲ್ಲಿನ ಪರಿಮಳ, ಹೊಟೇಲಿನ ಅಂದ ಚಂದ ಎಲ್ಲವನ್ನೂ ಆಸ್ವಾದಿಸುತ್ತ, ತಿಂಡಿ ಟೇಬಲ್‌ಗೆ ಬೇಗ ಬರಲಿ ಎಂದು ಕಾದು ಕೂತ ಹಾಗೆ. ಅಂದರೆ, ನಾವೇ ಹಕ್ಕಿಗಳ ಹತ್ತಿರ ಹೋಗಿ ಅದನ್ನು ಅರ್ಥ ಮಾಡಿಕೊಳ್ಳುತ್ತ, ಸವಾಲುಗಳನ್ನು ಎದುರಿಸುತ್ತ, ಕಷ್ಟಪಟ್ಟಾದರೂ ಇಷ್ಟದ ಫೋಟೊ ಹೊಡೆಯಬೇಕು. ಅನುಭವಿಸಿದವರಿಗೆ ಇದೊಂದು ವಿಚಿತ್ರ ಥ್ರಿಲ್.

ಕ್ಯಾಮೆರಾದ ಸಣ್ಣ ಲೆನ್ಸ್ ಆಧರಿಸಿ, ಕಳ್ಳ ಹೆಜ್ಜೆಗಳನ್ನಿಟ್ಟು ಹಕ್ಕಿಯ ಹತ್ತಿರತ್ತಿರ ಹೋಗುತ್ತ, 'ದೇವರೇ ಈ ಹಕ್ಕಿ ಪುರ್ರನೆ ಹಾರದಿರಲಿ' ಎಂದು ನಮ್ಮೊಳಗೆ ಪ್ರಾರ್ಥಿಸುತ್ತ ಸೆರೆಹಿಡಿಯೋದಿದೆಯಲ್ಲಾ – ಇದೊಂಥರಾ ತುಂಬಾ ಧ್ಯಾನಸ್ಥ ಮನೋಭಾವ, ಸಾವಧಾನ ಮತ್ತು ಆನಂದದ ಕೆಲಸ. ಹೀಗೆ ಸೆರೆಹಿಡಿದ ಫೋಟೊಗಳನ್ನು ಬೆರಗಿನಿಂದ ನೋಡುತ್ತ ಸಂಭ್ರಮಿಸುತ್ತೇವಲ್ಲ, ಹಿತವಾಗಿ ಪೋಸು ಕೊಟ್ಟ ಆ ಹಕ್ಕಿಗೆ ಒಳಗೊಳಗೇ ಕೃತಜ್ಞತೆ ಸಲ್ಲಿಸುತ್ತೇವಲ್ಲ, ಆ ಕ್ಷಣ ಛಾಯಾಗ್ರಾಹಕನಿಗೆ ಸ್ವರ್ಗ.

ನಮ್ಮನೆ ಅಂಗಳಕ್ಕೆ ಈ ಚಳಿಗಾಲಕ್ಕೆ ಬಂದ ಕಿತ್ತಳೆ ನೆಲ ಸಿಳ್ಳಾರ, ನವರಂಗ, ಕಾಜಾಣ, ಬಂಡೆ ಸಿಳ್ಳಾರ, ಕಾಕರಣೆ ಹಕ್ಕಿ, ರಾಬಿನ್ ಮೊದಲಾದ ಹಕ್ಕಿಗಳ ಹೆಜ್ಜೆಗಳನ್ನು ಫಾಲೊ ಮಾಡುತ್ತ ಚಿತ್ರಗಳನ್ನು ತೆಗೆದಿರುವೆ. ಆರ್ಥಿಕವಾಗಿ ಅನುಕೂಲವಾಗುವ ಒಳ್ಳೆಯ ಝೂಮ್ ಇರುವ ಪಾಯಿಂಟ್ ಅಂಡ್ ಶೂಟ್ ಕ್ಯಾಮೆರಾ, ಸಾಮಾನ್ಯ ಡಿಎಸ್‌ಎಲ್‌ಆರ್ ಕ್ಯಾಮೆರಾ ಜೊತೆ ಸಿಗುವ 200, 250 ಎಂಎಂ ಲೆನ್ಸ್‌ಗಳಿಂದಲೂ ಪರಿಸರದ ಸೂಕ್ಷ್ಮಗಳನ್ನು ಗಮನಿಸುತ್ತ, ಪರಿಸರವನ್ನು ಪ್ರೀತಿಸುತ್ತ ಒಂದಷ್ಟು ಚುರುಕುತನ ರೂಢಿಸಿಕೊಂಡರೆ ನಾವು ಚಿತ್ರವಾಗಿಸುವ ವಿಷಯ (ಸಬ್ಜೆಕ್ಟ್)ದ ಬಗ್ಗೆ ಪ್ರೀತಿಯಿದ್ದರೆ ನಮ್ಮ ಪ್ರಯತ್ನಕ್ಕೆ ಬಾನಾಡಿಗಳೂ ಓ ಎಂದಾವು.

ಪ್ರತಿಕ್ರಿಯಿಸಿ: feedback@sudha.co.in

